ಮನಸ್ಸಿನಲ್ಲಿ ಒಂದು ಪುಳಕ ಎದ್ದು ಅಡಗಿತು. ಮೆದುಳು ರೆಸ್ಟ್ ತೆಗೆದುಕೊಳ್ಳಲು ಹೊರಟು ಹೋಯಿತೋ ಎಂಬ ಸಂಶಯ ಬಂದು ಸುರಕ್ಷತೆಯ ಅಲಾರಾಮನ್ನು ತಟ್ಟಿದೆ. ಬ್ಯಾಟರಿ ಮುಗಿದುಹೋದ ಗಡಿಯಾರದಂತೆ ಮೌನ ವಹಿಸಿತು ಅಲಾರಾಮ್.

"ಇಲ್ಲ ಇನ್ನೂ ನಿಮ್ಮ ಕನ್ವೆಂಷನ್ ಮುಗಿಯಲಿಲ್ಲ ಅಂದುಕೊಂಡೆ."

"ನಮಗೆ ಲಂಚ್‌ವರೆಗೆ ಮಾತ್ರ. ಅದರನಂತರ ನನ್ನ ಪ್ರೈವೇಟ್ ಮೀಟಿಂಗ್ಸ್ ಇತ್ತು. ಈಗ ಮುಗಿಯಿತು, ನಿಮ್ಮನ್ನ ನೋಡಿದ ಕೂಡಲೇ..."

"ಓ, ನೀವು ಕಂಟಿನ್ಯೂ ಮಾಡಿ" ತುಟಿಯಿಂದ ಹೊರಟ ಮಾತುಗಳು.

"ಆಮೇಲೆ ನನ್ನ ಕಾಫೀ?"

ಬಿಡಲ್ಲಾಂತ ಕಾಣುತ್ತೆ. ಮನಸ್ಸಿನ ಯಾವುದೋ ಮೂಲೆಯಲ್ಲಿ, ದುರ್ಬಲವಾದ ಒಂದು ಎಪಿಸೆಂಟರ್ ರೂಪಗೊಳ್ಳುವುದನ್ನು ಅರಿಯಲು ಸಾಧ್ಯವಾಯಿತು.

"ತೆಗೆದುಕೊಳ್ಳಿ ದುಡ್ಡು..." ಚೀಲವನ್ನು ತೆರೆದೆ.

"ಏನ್ರೀ ಕಂಡಕ್ಟರ್ ಹಾಗೇ ಟಕ್ ಟಕ್ ಅಂತ ಹ್ಯಾಂಡ್ ಬ್ಯಾಗನ್ನ ತೆರೀತೀರಿ. ನನಗೆ ಕಾಫೀನೇ ಬೇಕು. ಕಾಫೀ ಪುಡಿ, ಡಿಕಾಕ್ಷನ್, ಕಾಫೀ ಬೀನ್ಸ್ ಹೀಗೆ ಏನಾದರೂ ತೆಗೆಸಿಕೊಡಿ. ಆದರೆ, ಹಣ ಮಾತ್ರ ಕೊಡ್ಬೇಡ್ರೀ."

ನಗುತ್ತಲೇ, "ಸರಿ ಬನ್ನಿ ಕಾಫೀ ಶಾಪಿಗೆ ಹೋಗೋಣಾ" ಎಂದು ಲಿಫ್ಟ್ ಕಡೆಗೆ ನಡೆದೆ.

"ಒಂದು ಒಳ್ಳೇ ಕಾಫೀ ಕೊಡಿಸಬಾರದೇ? ಇಲ್ಲಿ ಕುಡಿಯೋದರ ಬದಲು, ನನ್ನ ಸಿದ್ಧಾಂತವನ್ನ ಉಲ್ಲಂಘಿಸಿ ನಾನು ಹಣವನ್ನೇ ತೆಗೆದುಕೊಳ್ತೀನಿ, ಬಿಡಿ."

"ನಾನು ಮನೆಗೆ ಹೋಗಬೇಕು, ಟೈಮ್ ಆಯ್ತು."

ನಿರಾಶೆ ಮಾರ್ಕರ್ ಪೆನ್ನಿನಿಂದ ಅವನ ಮುಖದಲ್ಲಿ ಬರೆದಿತ್ತು.

"ಓ ಹಾಗಾದರೆ ಸರಿ, ನೀವು ಹೊರಡಿ." ನನ್ನ ಮುಖವನ್ನೇ ದಿಟ್ಟಿಸಿ ನೋಡುತ್ತಾ, ನಗದೇ ಸೀರಿಯಸ್ಸಾಗಿ ಹೇಳಿದ.

'ಈ ಭೇಟಿ ಹೀಗೆ ಕೊನೆಯಾಗಬೇಕೆ?' ಎಂಬ ಚಡಪಡಿಕೆ, ನನ್ನ ಮುಖದಲ್ಲಿ ಕಂಡಿರಬೇಕು. ನನಗೆ ಯೋಚಿಸಲು ಸಮಯ ಕೊಟ್ಟು ಕಾಯುತ್ತಿದ್ದ.

"ನಿಮಗೆ ಈ ಸಂಜೆ ಏನು ಕಾರ್ಯಕ್ರಮವಿದೆ?"

